(12) ಮೈಸೂರಿನ ಚಾಮುಂಡಿ ಬೆಟ್ಟಕ್ಕೆ ರೋಪ್‌ವೇ ಹಾಕುವುದು.

ಶ್ರೀ ವೇದಾಂತ ಹೆಬ್ಬಿಗೆ (ಕೃಷ್ಣರಾಜ) . — ಮಾನ್ಯ ಅಧ್ಯಕ್ಷರೇ, ಮೈಸೂರು ನಗರದಲ್ಲಿರುವ ಚಾಮುಂಡಿ ಬೆಟ್ಟಕ್ಕೆ ರೋಪ್‌ವೇ ಹಾಕುವ ಯೋಜನೆ ಹಾಗೂ ಚಾಮುಂಡಿ ಬೆಟ್ಟದ ಅಡಿಯಲ್ಲಿ ನೆಹರೂ ಲೋಕ ನಿರ್ಮಾಣ ಮಾಡುವ ಯೋಜನೆಗಳ ಬಗ್ಗೆ ಸರ್ಕಾರ ಇದುವರೆವಿಗೆ ಕೈಗೊಂಡಿರುವ ಕ್ರಮವೇನು? ಇದರ ಬಗ್ಗೆ ಸರ್ಕಾರ ಯಾವುದಾದರೂ ಸಮಿತಿಯನ್ನು ರಚನೆ ಮಾಡಿದೆಯೇ? ಸಮಿತಿ ವರದಿ ಸಲ್ಲಿಸಿದೆಯೆ? ಇದರ ಬಗ್ಗೆ ಸಂಬಂಧಪಟ್ಟ ಸಚಿವರ ಗಮನ ಸೆಳೆಯಬಯಸುತ್ತೇನೆ.

SRI A. LAKSHMISAGAR.—Mr, Speaker Sir, it is under the active consideration of the Government.

(13) ಭೂ ಸುಧಾರಣಾ ಕಾನೂನಿನನ್ವಯಂ ಕೃಷಿ ಕಾರ್ಮಿಕರು ಮನೆ ನಿವೇಶನಗಳಿಗೆ ಅರ್ಜಿ ಸಲ್ಲಿಸಲು ಸಮಯಾವಕಾಶ ನೀಡವುದಂ,

ಶ್ರೀ ಬಸವರಾಜ (ಬ್ರಹ್ಮಾವರ).—ಮಾನ್ಯ ಅಧ್ಯಕ್ಷರೇ, ಭೂಸುಧಾರಣ ಕಾನೂನಿನ ಅನ್ವಯ ಕೃಷಿ ಕಾರ್ಮಿಕರು ಮನೆ ನಿವೇಶನದ ಹಕ್ಕಿಗಾಗಿ ಫಾರಂ ನಂ. ೨–ಎಯಲ್ಲಿ ಅರ್ಜಿ ಸಲ್ಲಿಸಬೇಕಾಗಿತ್ತು. ಕೆಲವು ವರ್ಷಗಳ ಹಿಂದೆ ಕಾನೂನಿಗೆ ತಿದ್ದುಪಡಿ ಆಗಿ ಕುಶಲ ಕಾರ್ಮಿಕ ವರ್ಗಕ್ಕೆ ಇದನ್ನು ವಿಸ್ತರಿಸಲಾಗಿತ್ತು. ಆದರೆ ಎಲ್ಲರಿಗೂ ಈ ಸವಲತ್ತಿನ ವಿಚಾರ ತಿಳಿದು ಅರ್ಜಿ ಸಲ್ಲಿಸಲು ಸಾಕಷ್ಟು ಸಮಯಾವಕಾಶವಿರಲಿಲ್ಲ. ಹಾಗೂ ಸಾಧ್ಯವಾಗಿರಲಿಲ್ಲ ಆದುದರಿಂದ ಪುನ: ಅರ್ಜಿ ಸಲ್ಲಿಸಲು ಕಾಲಾವಕಾಶ ನೀಡಬೇಕಾಗಿ ಒತ್ತಾಯಿಸುತ್ತೇನೆ. ಕೆಲವು ಪ್ರಸಂಗಗಳಲ್ಲಿ ಅರ್ಜಿ ಸಲ್ಲಿಸಿದ್ದರೂ ಅರ್ಜಿ ದಾಖಲಾಗದ ನಿದರ್ಶನಗಳಿವೆ. ಉದಾಹರಣೆಗೆ ಉಡುಪಿ ತಾಲ್ಲೂಕಿನ ವಾರಂಬಳ್ಳಿ ಗ್ರಾಮದ ಗುಡೆಬೆಟ್ಟು ಅಣ್ಣಯ್ಯ ಪೂಜಾರಿಯ ಮಗ ನಾರಾಯಣ ಪೂಜಾರಿ ಎಂಬುವರು ವಾರಂಬಳ್ಳಿ ಗ್ರಾಮದ ಸರ್ವೆ ನಂ. ೬೬–೧೨ರಲ್ಲಿ ೦–೦೫ ಸೆಂಟ್ಸ್ ಸ್ಥಳಕ್ಕೆ ತಾ. ೧೧–೨–೮೧ರಂದು ಅರ್ಜಿ ಸಲ್ಲಿಸಿದ್ದರೂ ಆ ಕುರಿತಾದ ದಾಖಲೆ ಅವರಲ್ಲಿದ್ದರೂ ಅರ್ಜಿ ದಾಖಲಾತಿಯಾಗಿಲ್ಲವೆಂದು ಭೂ ನ್ಯಾಯಮಂಡಲಿ, ಉಡುಪಿ ಇದರ ವಿಶೇಷ ತಹಶೀಲ್ದಾರರು ತಿಳಿಸಿರುತ್ತಾರೆ. ಧಣಿಗಳೊಡನೆ ಶಾಮೀಲಾದ ಭ್ರಷ್ಟ ಅಧಿಕಾರಶಾಹಿ ವ್ಯವಸ್ಥೆಯಲ್ಲಿ ಬಡವರ ಅರ್ಜಿಗಳೂ ಮಾಯವಾಗಿರುವುದು ಸ್ವಾಭಾವಿಕ. ಈ ಕುರಿತು ಸಂಪೂರ್ಣ ತನಿಖೆಯಾಗಬೇಕು ಮತ್ತು ಈ ಅರ್ಜಿ ಊರ್ಜಿತಗೊಳ್ಳಬೇಕು. ಇಲ್ಲವಾದಲ್ಲಿ ಈ ಮೊದಲು ಹೇಳಿದಂತೆ ಕಾನೂನಿನ ಉಪಯೋಗದಿಂದ ಯಾವ ಅರ್ಹ ಬಡವನೂ ವಂಚಿತನಾಗದಂತೆ ಅರ್ಜಿ ಹಾಕುವ ಕಾಲಾವಧಿಯನ್ನು ಮತ್ತೊಮ್ಮೆ ವಿಸ್ತರಿಸಬೇಕು ಎಂದು ಒತ್ತಾಯಿಸುತ್ತೇನೆ.

ಶ್ರೀ ಎಸ್‌ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಭೂ ಸುಧಾರಣಾ ಕಾನೂನಿನ ಕಲಂ ೩೮ರ ಪ್ರಕಾರ ತನ್ನದಲ್ಲದ ಜಮೀನಿನಲ್ಲಿ ಇರುವ ಮಾಸದ ಮನೆಯಲ್ಲಿ ಇರತಕ್ಕ ಕೃಷಿ ಕಾರ್ಮಿಕರು ಆ ಮನೆಯ ಮೇಲಿನ ಅಧಿಭೋಗದಾರಿಕೆಯನ್ನು ಹೊಂದಲು ದಿನಾಂಕ. ೩೧–೧೨–೭೯ರೊಳಗಾಗಿ ಭೂ ಸುಧಾರಣಾ ಕಾನೂನಿನ ಕಲಂ ೩೮ರ ಅನ್ವಯ ವಿಚಾರಣೆಗಾಗಿ ಫಾರಂ ನಂ. ೨–ಎ ನಲ್ಲಿ ಭೂ–ನ್ಯಾಯ ಮಂಡಲಿಗೆ ಅರ್ಜಿ ಸಲ್ಲಿಸಬೇಕಾಗಿತ್ತು. ಕೃಷಿ ಕಾರ್ಮಿಕರು ಎದುರುಸುತ್ತಿರುವ ತೊಂದರೆಯನ್ನು ಗಮನದಲ್ಲಿಟ್ಟು ಕೊಂಡು ಫಾರಂ ನಂ ೨–ಎ ಯನ್ನು ಸಲ್ಲಿಸಲಂ ನಿಗದಿಪಡಿಸಲಾಗಿದ್ದ ಅವಧಿಯನ್ನು ೧–೧೨–೮೧ರ ತನಕ ಮತ್ತು ೩೧–೩–೮೩ರ ವರೆಗೆ ವಿಸ್ತರಿಸಲಾಯಿತು. ಹೀಗೆ ಕೃಷಿ ಕಾರ್ಮಿಕರು ತಾವು ವಾಸಿಸುತ್ತಿರುವ ಮನೆ ಮತ್ತು ಸುತ್ತಲಿನ ಜಮೀನಿನ ಅಧಿಭೋಗದಾರಿಕೆಯನ್ನು ಪಡೆಯಲು ಫಾರಂ ನಂ.೨–ಎನಲ್ಲಿ ಅರ್ಜಿ ಸಲ್ಲಿಸಲು ಸಾಕಷ್ಟು ಸಮಯವನ್ನು ನೀಡಲಾಗಿದೆ. ಆದುದರಿಂದ ಮತ್ತೇ ಈ ಕಾಲ ಮಿತಿಯನ್ನು ವಿಸ್ತರಿಸುವ ಅಗತ್ಯವಿಲ್ಲ ಫಾರಂ ನಂ.೨–ಎ ನಲ್ಲಿ ಸಲ್ಲಿಸಿರುವ ಅರ್ಜಿಗಳು ಕಾಣೆಯಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿಲ್ಲ. ಅದಾಗ್ಯೂ ವಿಷಯವನ್ನು ಪರಿಶೀಲಿಸಿ ಕಾನೂನಿನ್ವಯ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಮಾನ್ಯ ಸದಸ್ಯರು ಅರ್ಜಿ ಸಲ್ಲಿಸಲು ಕಾಲಾವಧಿಯನ್ನು ವಿಸ್ತರಿಸುವುದಕ್ಕೆ ಹೇಳಿದ್ದಾರೆ, ಸರ್ಕಾರ ಅದನ್ನು ಪರಿಶೀಲಿಸುತ್ತದೆ ಆ ಮೇಲೆ ಕೆಲವು ಅರ್ಜಿಗಳು ಸಲ್ಲಿಸಿದ್ದು ಕಾಣೆಯಾಗಿವೆ ಎಂದು ಹೇಳಿದ್ದಾರೆ. ಈ ರೀತಿ ಕಾಣೆಯಾಗಿರುವ ಅರ್ಜಿಗಳ ಬಗ್ಗೆ ವಿಚಾರಣೆ ಮಾಡಿ, ಪುನ: ಅರ್ಜಿ ಕೊಡಲಕ್ಕೆ ಅವಕಾಶ ಮಾಡಿಕೊಡಲಾಗುವುದು.